**ದಿನಾಂಕಃ 17.08.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ YDS ವಕೀಲರಿಂದಃ ವಾದಿ ಪರಃ**

ಕ್ಯಾತಸಂದ್ರದಲ್ಲಿರುವ ನಿವೇಶನವನ್ನು ನನ್ನ ತಂದೆಯ ಹೆಸರಿಗೆ ಖಾತಾ ಆಗದೆ ಇದ್ದ ಕಾರಣ ನಮ್ಮ ತಾತರವರು ನಮ್ಮ ತಾಯಿ ಹೆಸರಿಗೆ ದಾನ ಪತ್ರ ಬರೆದುಕೊಟ್ಟರು ಎಂದರೆ ನಿಜ. ಸಾಕ್ಷಿಗೆ ಈಗ ಒಂದು ಕರಾರು ಪತ್ರವನ್ನು ತೋರಿಸಿ ನಮ್ಮ ಸೋದರ ಮಾವ ಯೋಗನಂದರವರು 1996 ರಲ್ಲಿ ನಮ್ಮ ತಂದೆಯ ಹೆಸರಿಗೆ ಮಾಡಿಕೊಟ್ಟಿದ್ದು ಎಂದರೆ ಒಪ್ಪಿಕೊಳ್ಳುತ್ತಾರೆ. ನಮ್ಮ ತಂದೆ ಆಸ್ತಿಯನ್ನು ಖರೀದಿ ಮಾಡಲು ಈ ಕರಾರು ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಯೋಗನಂದರವರಿಗೆ ಜೀವನ ಮಾಡಲು ಕಷ್ಟವಿದ್ದ ಕಾರಣ ಆಸ್ತಿಯನ್ನು ಮಾರಾಟ ಮಾಡಲು ಹೋಗಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ಮೃತಪಟ್ಟ ನಂತರ ನನ್ನ ತಾಯಿ ಸೋದರ, ಸೋದರಿ ಒಟ್ಟಾಗಿ ಇದ್ದೇವೆ ಎಂದರೆ ನಿಜ. ನಾವು ಒಟ್ಟಾಗಿ ತುಮಕೂರಿನಲ್ಲಿ ವಾಸವಾಗಿದ್ದೇವೆ ಎಂದರೆ ನಿಜ. ನನ್ನ ಸೋದರಿಯ ಮದುವೆ 2007 ರಲ್ಲಿ ಆಗಿರುತ್ತದೆ ಎಂದರೆ ನಿಜ. 2006 ರಲ್ಲಿ ಸರ್ವೆ ನಂ.191/2 ರ ಆಸ್ತಿಯನ್ನು ನನ್ನ ಸೋದರಿಯ ಮದುವೆಗೋಸ್ಕರ ಮಾರಾಟವನ್ನು ನಾವು ಕುಟುಂಬದ ಎಲ್ಲಾ ಸದಸ್ಯರು ಮಾಡಿದೆವು ಎಂದರೆ ಸಾಕ್ಷಿ ಮದುವೆಗೋಸ್ಕರ ಅಲ್ಲ, ಅದನ್ನು ನೋಡಿಕೊಳ್ಳಲು ಆಗದ ಕಾರಣ ಮಾರಾಟ ಮಾಡಿದೆವು ಎಂದು ಹೇಳುತ್ತಾರೆ. 2015 ಮಾರ್ಚ್ ನಲ್ಲಿ ನನ್ನ ಅಣ್ಣನ ಮದುವೆ ಆಯಿತು ಎಂದರೆ ನಿಜ. ಆಗ ನಾವು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದೆವು ಎಂದರೆ ನಿಜ. ದಿಃ 15.08.2015 ರಲ್ಲಿ ವಾದಿಗೆ ಬೆಂಗಳೂರಿನಲ್ಲಿ ಅಪಘಾತವಾಗಿ ತಲೆಗೆ ತೀವ್ರಸ್ವರೂಪದ ಗಾಯವಾಗಿತ್ತು ಎಂದರೆ ಸರಿಯಲ್ಲ. ಅವರು ನೇಣು ಹಾಕಿಕೊಂಡು ಆತ್ಮಹತ್ಯೆಗೆ ಪ್ರಯತ್ನ ಮಾಡಿದ್ದು, ಆ ಸಮಯದಲ್ಲಿ ಬಿದ್ದು ತಲೆಗೆ ಗಾಯವಾಗಿರುತ್ತದೆ ಎಂದು ಹೇಳುತ್ತಾರೆ. ಆ ಕಾರಣ ವಾದಿ ಒಂದು ವರ್ಷ ಸಂಪೂರ್ಣ ವಿಶ್ರಾಂತಿಯಲ್ಲಿ ಇದ್ದರು ಎಂದರೆ ಸಾಕ್ಷಿ 3-4 ತಿಂಗಳು ವಿಶ್ರಾಂತಿಯಲ್ಲಿ ಇದ್ದರು ಎಂದು ಹೇಳುತ್ತಾರೆ. ಆಗ ಅವರಿಗೆ ನೆನಪಿನ ಶಕ್ತಿ ಕಡಿಮೆ ಆಯಿತು ಎಂದರೆ

ಸರಿಯಲ್ಲ. ನಂತರ ಅವರು ಕೆಲಸ ಮಾಡುತ್ತಿಲ್ಲ ಎಂದರೆ ನಿಜ. ಅದಕ್ಕೂ ಮೊದಲು ಅವರು ಚೆನ್ನಾಗಿ ಕೆಲಸ ಮಾಡುತ್ತಿದ್ದು ನಮ್ಮೊಂದಿಗೆ ಇದ್ದು ನಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಕೆಲಸ ಮಾಡುತ್ತಾ ನಮ್ಮೊಂದಿಗೆ ಇದ್ದರು ಆದರೆ ನಮ್ಮನ್ನು ನೋಡಿಕೊಂಡಿರುವುದಿಲ್ಲ ಎಂದು ಹೇಳುತ್ತಾರೆ. ಈ ಘಟನೆ ನೆಡದ ನಂತರ ನಾನು ನನ್ನ ತಾಯಿ ಬೇರೆ ವಾಸ ಮಾಡಲು ಪ್ರಾರಂಭಿಸಿದೆವು ಎಂದರೆ ಸಾಕ್ಷಿ ಅವರು ನಮ್ಮನ್ನು ಮನೆಯಿಂದ ಹೊರಗೆ ಹಾಕಿದರು ಎಂದು ಹೇಳುತ್ತಾರೆ. ಆಗ ನಾವು ವಾದಿಯ ಅಪಾರ್ಟ್ಮೆಂಟಲ್ಲಿ ವಾಸವಿದ್ದೆವು ಎಂದರೆ ನಿಜ. ಈ ಘಟನೆಯ ನಂತರ ನನ್ನ ಮತ್ತು ವಾದಿಯ ಮಧ್ಯೆ ಭಿನ್ನಾಭಿಪ್ರಾಯ ಉಂಟಾಯಿತು ಎಂದರೆ ನಿಜ. ಅದಕ್ಕೂ ಮೊದಲು ನಾವು ಅನೋನ್ಯವಾಗಿ ಚೆನ್ನಾಗಿ ಇದ್ದೇವು ಎಂದರೆ ನಿಜ. 5 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯಪತ್ರದಲ್ಲಿ ನಾನು ಸಹಿ ಮಾಡಿರುತ್ತೇನೆ ಎಂದರೆ ನಿಜ. ಆಗ ವಾದಿಗೆ ಕ್ರಯಪತ್ರಕ್ಕೆ ಸಹಿ ಮಾಡಿಕೊಡಲು ಕೇಳಿದೆವು ಅವರು ಬರಲಿಲ್ಲ. ನಾವು ವಾದಿಗೂ ಆಸ್ತಿಯಲ್ಲಿ ಹಕ್ಕು ಇರುವುದರಿಂದ ಸಹಿ ಮಾಡಲು ಕರೆದೆವು ಎಂದರೆ ನಿಜ. ಅವರ ಸಹಿ ಇಲ್ಲದೆ ಕ್ರಯ ಪತ್ರ ಮಾಡಿಕೊಟ್ಟಿದ್ದರಿಂದ ಸದರಿ ಕ್ರಯಪತ್ರ ಊರ್ಜಿತ ಆಗುವುದಿಲ್ಲ ಎಂದರೆ ಸರಿಯಲ್ಲ. ಖರೀದಿಸುವವರು ಮಕ್ಕಳ ಸಹಿ ಬೇಕು ಎಂದು ಕೇಳಿದ್ದಕ್ಕೆ ಸಹಿ ಹಾಕಿರುತ್ತೇವೆ. ನಾನು ನನ್ನ ತಾಯಿ ಉದ್ದೇಶಪೂರ್ವಕವಾಗಿ ವಾದಿ ಮತ್ತು ನನ್ನ ಸೋದರಿಯ ಮೋಸ ಮಾಡುವ ಉದ್ದೇಶದಿಂದ ಈ ಕ್ರಯ ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಬಿ ಅನುಸೂಚಿತ ಆಸ್ತಿ ಸಹ ನಾನು ನನ್ನ ತಾಯಿ ಮಾರಾಟ ಮಾಡಿರುತ್ತೇವೆ ಎಂದರೆ ನಿಜ. ಆಗ ವಾದಿ ಮತ್ತು ನನ್ನ ಅಕ್ಕನನ್ನು ಕರೆದಿರುವುದಿಲ್ಲ. ಏಕೆಂದರೆ ನನಗೆ ಅವರ ಅವಶ್ಯಕತೆ ಇರಲಿಲ್ಲ. ಖರೀದಿದಾರರು ಮಾಲೀಕರು ಸಾಕು ಎಂದು ಹೇಳಿದರು. ಸದರಿ ಜಮೀನಿನ ಪಕ್ಕದ ಜಮೀನನ್ನು ಅಭಿವೃದ್ದಿಪಡಿಸುವುದ್ದಕ್ಕೋಸ್ಕರ ಮತ್ತು ಸ್ವಲ್ಪ ಸಾಲ ಇದ್ದ ಕಾರಣ ಬಿ ಅನುಸೂಚಿತ ಆಸ್ತಿಯನ್ನು ಮಾರಾಟ ಮಾಡಿರುತ್ತೇವೆ. ಸಾಲ ನಾನು ನನ್ನ ತಾಯಿ ವೈಯಕ್ತಿಕ ಉದ್ದೇಶಕ್ಕಾಗಿ ಮಾಡಿದ್ದು ಎಂದರೆ ಸರಿಯಲ್ಲ. ಜಮೀನು ಅಭಿವೃದ್ದಿಗೋಸ್ಕರ ಮಾಡಿದ್ದೇವೆ. ಸಾಲವು ಎಸ್ ಬಿ ಐ ಚಿ.ನಾ.ಹಳ್ಳಿ ಶಾಖೆ ಮತ್ತು ಇತರೆ ಕೈ ಸಾಲ ಇದ್ದವು. ಜಮೀನು ಅಭಿವೃದ್ದಿ ಎಂದರೆ ಜಮೀನಿನಲ್ಲಿ ಇದ್ದ ಗಿಡವನ್ನು

ತೆಗೆಯಿಸಿ ಜಮೀನಿಗೆ ನೀರು ಬರುವ ಹಾಗೆ ಮಾಡಿದ್ದೆವು. ಬೋರ್ ವೆಲನ್ನು ಪುನಃ ಕೊರೆಸಿದ್ದೆವು. ಎಸ್ ಬಿ ಐ ನಲ್ಲಿ ರೂ.3 ಲಕ್ಷ ಸಾಲ ಮಾಡಿದ್ದೆವು ಅದು ಬಡ್ಡಿ ಸೇರಿ ರೂ.5 ಲಕ್ಷ ಆಗಿತ್ತು. ಸಾಲ ಪಡೆದು 12–15 ವರ್ಷ ಆಗಿರಬಹುದು. ಆಗ ವಾದಿ ಸಹ ನಮ್ಮೊಂದಿಗೆ ಇದ್ದರು. ಸಾಲ ಪಡೆದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಬಹದು. ನಾವು ಯಾವುದೇ ಜಮೀನನ್ನು ಅಭಿವೃದ್ಧಿ ಮಾಡಿರುವುದಿಲ್ಲ, ನಮ್ಮ ತಂದೆಯವರೆ ಅಭಿವೃದ್ಧಿ ಮಾಡಿದ್ದರು ಎಂದರೆ ಸರಿಯಲ್ಲ. ವಾದಿ ದುಡಿಯುತ್ತಾ ಇದ್ದರಿಂದ ನಮಗೆ ಸಾಲ ಮಾಡುವ ಅವಶ್ಯಕತೆ ಇರಲಿಲ್ಲ, ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ತಾಯಿ ವಾದಿ ಮನೆಯನ್ನು ಬಿಟ್ಟು ಬಂದ ನಂತರ ಉದ್ದೇಶಪೂರ್ವಕವಾಗಿ ಸಾಲ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ ಮತ್ತು ನನ್ನ ಅಕ್ಕನಿಗೆ ಬಿ ಅನುಸೂಚಿತ ಆಸ್ತಿಯಲ್ಲಿ ಹಕ್ಕು ಇರುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ವಾದಿ ಮತ್ತು ನನ್ನ ಅಕ್ಕನಿಗೆ ಮೋಸ ಮಾಡಬೇಕು ಎಂಬ ಉದ್ದೇಶದಿಂದ ಬಿ ಅನುಸೂಚಿತ ಆಸ್ತಿಯನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ ಮೊದಲು ವಾದಿ ನನಗೆ ನೋಟಿಸ್ ಕಳಿಸಿದ್ದರು ಎಂದರೆ ನಿಜ. ಅದಕ್ಕೆ ನಾವು ಉತ್ತರ ಕೊಟ್ಟಿರುವುದಿಲ್ಲ. ದಾವಾ ಎಲ್ಲಾ ಆಸ್ತಿಗಳು ಒಟ್ಟು ಕುಟುಂದ ಆಸ್ತಿಗಳು ಎಂದರೆ ಸರಿಯಲ್ಲ. ವಾದಿ ಮತ್ತು ನನ್ನ ಅಕ್ಕನಿಗೆ ಈ ಆಸ್ತಿಗಳ ಮೇಲೆ ಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ. ನಾನು ನನ್ನ ತಾಯಿ ಸೇರಿಕೊಂಡು ವಾದಿಗೆ ಮೋಸ ಮಾಡುವ ಉದ್ದೇಶದಿಂದ ಒಟ್ಟು ಕುಟುಂಬದ ಆಸ್ತಿಯನ್ನು ಮಾರಾಟ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಗಳಲ್ಲಿ ¼ ನೇ ಅಂಶ ಪಾಲು ಇದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

ಸಹಿ/–

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ,

ಚಿಕ್ಕನಾಯಕನಹಳ್ಳಿ.